## 14. ಪದೇಪದೇ ಸುಗ್ರೀವಾಜ್ಞೆ ಸಮಂಜಸವೇ

ಕೋವಿಡ್ ಬಿಕ್ಕಟ್ಟಿನ ಪರಿಣಾಮ ಬೆರಳಣಿಕೆಯ ದಿನಗಳಿಗೆ ಸೀಮಿತವಾಗಿದ್ದ ಸಂಸತ್ತಿನ ಇತ್ತೀಚಿನ ಮುಂಗಾರು ಅಧಿವೇಶನದಲ್ಲಿ ಕೃಷಿ ಸೇರಿದಂತೆ ರಾಷ್ಟ್ರೀಯ ಮಹತ್ವದ ವಿಚಾರಗಳಿಗೆ ಸಂಬಂಧಿಸಿದ ಹತ್ತಕ್ಕೂ ಹೆಚ್ಚು ಸುಗ್ರೀವಾಜ್ಞೆಗಳ ಬದಲಿಗೆ ವಿಧೇಯಕಗಳು ಮಂಡನೆಯಾಗಿವೆ. ಬೆನ್ನುಬೆನ್ನಿಗೆ ಸುಗ್ರೀವಾಜ್ಞೆಗಳ ಟ್ರೆಂಡ್ ಇತ್ತೀಚಿನ ವರ್ಷಗಳಲ್ಲಿ ಮತ್ತೆ ಚಾಲ್ತಿಗೆ ಬರುತ್ತಿದೆ. ಕೇಂದ್ರ ಸರ್ಕಾರ ಮತ್ತು ಪ್ರತಿಪಕ್ಷಗಳ ನಡುವೆ ಸಂಘರ್ಷಕ್ಕೆ ಕಾರಣವಾಗಿದೆ. ಇದರ ಸಾಧಕ–ಬಾಧಕಗಳ ಬಗ್ಗೆ ಇಲ್ಲಿದೆ ವಿವರ.

ಸಂಸತ್ತಿನ ಇತ್ತೀಚಿನ ಮುಂಗಾರು ಅಧಿವೇಶನ ಫಟಾಫಟ್ ಮುಕ್ತಾಯವಾಗಿದೆ. ಕೋವಿಡ್ ಕೇಸ್‌ಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ನಿಗದಿತ ಅವಧಿಗಿಂತಲೂ, ಎಂಟು ದಿನ ಮೊದಲೇ ಮುಕ್ತಾಯವಾಯಿತು. ಸೆಪ್ಟೆಂಬರ್ 14–23ರ ತನಕ ನಡೆದ ಅಧಿವೇಶನದಲ್ಲಿ ಬರೋಬ್ಬರಿ 25 ವಿಧೇಯಕಗಳು ಕ್ಷಿಪ್ರವಾಗಿ ಅಂಗೀಕಾರವಾಯಿತು. ಇದರಲ್ಲಿ 11 ಸುಗ್ರೀವಾಜ್ಞೆಗಳನ್ನು ಕಾಯಿದೆಯಾಗಿ ಬದಲಿಸಿದ ವಿಧೇಯಕಗಳೂ ಇತ್ತು. ರಾಜ್ಯಸಭೆಯಲ್ಲಿ 2020ರ ಸೆಪ್ಟೆಂಬರ್ 22 ರಂದು ಕೇವಲ ಮೂರೂವರೆ ಗಂಟೆಗಳಲ್ಲಿ 7 ಪ್ರಮುಖ ವಿಧೇಯಕಗಳು, ಪ್ರತಿಪಕ್ಷಗಳ ಬಹಿಷ್ಕಾರಗಳ ನಡುವೆ, ಸೀಮಿತ ಚರ್ಚೆಗಳೊಂದಿಗೆ ಅಂಗೀಕಾರವಾಯಿತು. ಎನ್‌ಡಿಎಯ ಮಿತ್ರಪಕ್ಷಗಳು ಮಾತ್ರ ಚರ್ಚೆಯಲ್ಲಿ ಭಾಗವಹಿಸಿದ್ದವು. ಮಹತ್ವದ ಕೃಷಿ ಮಾರುಕಟ್ಟೆ ತಿದ್ದುಪಡಿ ಸೇರಿದಂತೆ 11 ಕಾಯಿದೆಗಳ ಜಾರಿಗೆ ಮುನ್ನ ಸುಗ್ರೀವಾಜ್ಞೆಯನ್ನು ಬಳಸಲಾಯಿತು.

ಭಾರತದಲ್ಲಿ ಸುಗ್ರೀವಾಜ್ಞೆ ಹೊಸತೇನಲ್ಲದಿದ್ದರೂ, ಅದರ ವ್ಯಾಪಕ ಬಳಕೆಗೆ ವಿರೋಧವಿದೆ. ಈ ಹಿಂದೆ 1952ರ ಮೊದಲ ಲೋಕಸಭೆಯಿಂದ ಈಗಿನ 17ನೇ ಲೋಕಸಭೆಯ ತನಕ 700ಕ್ಕೂ ಹೆಚ್ಚು ಸುಗ್ರೀವಾಜ್ಞೆಗಳನ್ನು ಹೊರಡಿಸಲಾಗಿದೆ. ಕಳೆದ 70 ಮತ್ತು 90 ದಶಕದಲ್ಲಿ ನಾನಾ ಕಾರಣಗಳಿಗೆ ವ್ಯಾಪಕವಾಗಿ ಬಳಕೆಯಾಗಿತ್ತು. ಆದರೆ ಬಹುಕಾಲದ ನಂತರ ಮತ್ತೆ ಅದನ್ನು ಪದೇಪದೇ ಅವಲಂಬಿಸಲಾಗುತ್ತಿದೆ.

**ರಾಜ್ಯ ಸರ್ಕಾರ ತಡೆಯಬಹುದೇ:** ಸುಗ್ರೀವಾಜ್ಞೆಗಳನ್ನು ಬಳಸಿರುವ ಕಾಯಿದೆಗಳನ್ನು ರಾಜ್ಯಗಳಲ್ಲಿ ಜಾರಿಗೊಳಿಸದಿರಲು ಪ್ರತಿಪಕ್ಷ ಕಾಂಗ್ರೆಸ್ ಪರಿಶೀಲಿಸುತ್ತಿದೆ. ರೈತರಿಗೆ ಎಂಎಸ್‌ಪಿಯನ್ನು ರದ್ದುಪಡಿಸಲಿರುವ, ಎಪಿಎಂಸಿಯನ್ನು ಅಸ್ತವ್ಯಸ್ತಗೊಳಿಸಲಿರುವ ರೈತ ವಿರೋಧ ಕೃಷಿ ಕಾಯಿದೆಗಳನ್ನು ಕಾಂಗ್ರೆಸ್ ವಿರೋಧಿಸುತ್ತಿದೆ. ಆದ್ದರಿಂದ ಕಾಂಗ್ರೆಸ್ ಆಡಳಿತದಲ್ಲಿರುವ ರಾಜ್ಯಗಳಲ್ಲಿ ಸಂವಿಧಾನದ 254(2)ನೇ ವಿಧಿಯ ಅಡಿಯಲ್ಲಿ ಕೇಂದ್ರದ ಕಾಯಿದೆಗಳನ್ನು ತಡೆಯಲು ಹೊಸ ಕಾನೂನು ಜಾರಿಗೊಳಿಸುವ ಬಗ್ಗೆ ಸಮಾಲೋಚಿಸಲು ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಸೂಚಿಸಿದ್ದಾರೆ ಎಂದು ಕೆ.ಸಿ.ವೇಣುಗೋಪಾಲ್ ಅವರು ಟ್ವೀಟ್ ಮಾಡಿದ್ದಾರೆ. ರಾಜ್ಯ ಸುಗ್ರೀವಾಜ್ಞೆ ಹೊರಡಿಸಿದರೂ, ಅದಕ್ಕೆ ರಾಷ್ಟ್ರಪತಿಯವರ ಅಂಕಿತಬೇಕಾಗುತ್ತದೆ.

**16ನೇ ಲೋಕಸಭೆಯಲ್ಲಿ ಏನಾಗಿತ್ತು:** ಕಳೆದ 16ನೇ ಲೋಕಸಭೆಯಲ್ಲಿ 133 ವಿಧೇಯಕಗಳು ಅಂಗೀಕಾರವಾಗಿತ್ತು. 15ನೇ ಲೋಕಸಭೆಗೆ ಹೋಲಿಸಿದರೆ 15% ಹೆಚ್ಚು. ಶೇ.32ರಷ್ಟು ವಿಧೇಯಕಗಳು ಮೂರು ಗಂಟೆಗೂ ಹೆಚ್ಚು ಹೊತ್ತು ಚರ್ಚೆಗೀಡಾಗಿತ್ತು. ಹೀಗಿದ್ದರೂ, ಸಂಸದೀಯ ಸಮಿತಿಯ ವಿಸ್ತೃತ ಪರಿಶೀಲನೆಗೆ ಒಪ್ಪಿಸಿದ್ದ ವಿಧೇಯಕಗಳು ಕಡಿಮೆಯಾಗಿತ್ತು. 15ನೇ ಲೋಕಸಭೆಯಲ್ಲಿ ಶೇ.71 ಮತ್ತು 14ನೇ ಲೋಕಸಭೆಯಲ್ಲಿ ಶೇ.60ರಷ್ಟು ವಿಧೇಯಕಗಳನ್ನು ಸಮಿತಿಯ ಪರಿಶೀಲನೆಗೆ ವಹಿಸಲಾಗಿತ್ತು. 16ನೇ ಲೋಕಸಭೆಯಲ್ಲಿ ಬಜೆಟ್‌ನ ಶೇ.83ರಷ್ಟು ಭಾಗವನ್ನು ಚರ್ಚೆ ಇಲ್ಲದೆ ಅಂಗೀಕರಿಸಲಾಗಿತ್ತು. ಕೇವಲ ಶೇ.25 ರಷ್ಟು ವಿಧೇಯಕಗಳನ್ನು ಮಾತ್ರ ಸಮಿತಿಯ ಪರಿಶೀಲನೆಗೆ ವಹಿಸಲಾಗಿತ್ತು.

**ಸುಗ್ರೀವಾಜ್ಞೆಗಳ ಬಗ್ಗೆ ಎಚ್ಚರಿಸಿದ್ದ ಮಾಜಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ:** ಸುಗ್ರೀವಾಜ್ಞೆಗಳನ್ನು ಪದೇ ಪದೇ ಬಳಸುವುದರಿಂದ ಸಂಸತ್ ವ್ಯವಸ್ಥೆ ದುರ್ಬಲವಾಗುತ್ತದೆ. ನಮ್ಮ ಸಂಸದೀಯ ವ್ಯವಸ್ಥೆಯ ಗುಣಮಟ್ಟ ಹದಗೆಡುತ್ತಿರುವುದರ ಮತ್ತೊಂದು ಲಕ್ಷಣವೇ ಸುಗ್ರೀವಾಜ್ಞೆಗಳ ಬಳಕೆ. ಸಂಸತ್ತು ಅಥವಾ ವಿಧಾನಸಭೆ ಅಧಿವೇಶನಗಳು ನಡೆಯದಿರುವ ಸಂದರ್ಭ, ತುರ್ತಾಗಿ ಕಾನೂನು ಜಾರಿಗೊಳಿಸಲು ವಿಶೇಷಾಧಿಕಾರವಾಗಿ ಸುಗ್ರೀವಾಜ್ಞೆಯನ್ನು ಹೊರಡಿಸಬಹುದು. ಆದರೆ ಮುಂದಿನ ಸಂಸತ್ ಅಥವಾ ವಿಧಾನಸಭೆ ಅಧಿವೇಶನ ಆರಂಭವಾದ 6 ವಾರಗಳೊಳಗೆ ಅದನ್ನು ಅಂಗೀಕಾರಗೊಳಿಸಬೇಕು. ತಪ್ಪಿದರೆ ಮತ್ತೊಮ್ಮೆ ಹೊರಡಿಸಬೇಕು.

ಇಲ್ಲದಿದ್ದರೆ ಅಮಾನ್ಯವಾಗುತ್ತದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಸರ್ಕಾರಗಳು ಪದೇಪದೇ ಸುಗ್ರೀವಾಜ್ಞೆಯ ಮೊರೆ ಹೋಗುವುದನ್ನು ಕಾಣುತ್ತಿದ್ದೇವೆ ಎಂದು ಮಾಜಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ವಿವರಿಸಿದರು.

**ವ್ಯಾಪಕ ಚರ್ಚೆ ಅಗತ್ಯ:** ಸಂಸತ್ತು ಮತ್ತು ಶಾಸನಸಭೆಗಳಲ್ಲಿ ಗಹನ ಚರ್ಚೆ ನಡೆಯದೆಯೇ ವಿಧೇಯಕಗಳು ಅಂಗೀಕಾರವಾಗುತ್ತಿರುವುದು ಕೂಡ ಸಮಂಜಸವಲ್ಲ ಎಂದು ಮುಖರ್ಜಿ ಹೇಳಿದ್ದರು. ಪ್ರತಿಪಕ್ಷಗಳೂ 1950, 60 ಮತ್ತು 70ರ ದಶಕದಲ್ಲಿ ಸಂಸತ್ತಿನಲ್ಲಿ ಬಜೆಟ್ ಮತ್ತು ಹಣಕಾಸು ವಿಧೇಯಕಗಳಿಗೆ ಸಂಬಂಧಿಸಿದ ವ್ಯಾಪಕ ಚರ್ಚೆ ನಡೆಯುತ್ತಿತ್ತು. ಭಾರತದ ಮೊದಲ ಬಜೆಟ್ ಕೇವಲ ರೂ.197 ಕೋಟಿಗಳ ಗಾತ್ರದ್ದಾಗಿದ್ದರೂ ಗಹನ ಚರ್ಚೆಯಾಗಿತ್ತು. ಮೊದಲ ಪಂಚ ವಾರ್ಷಿಕ ಯೋಜನೆ ರೂ.2,000 ಕೋಟಿಗಳಾಗಿತ್ತು. ಈ ಬಗ್ಗೆ 4 ದಿನ ಸತತ ಚರ್ಚೆ ನಡೆದಿತ್ತು. ಅಭಿವೃದ್ಧಿಪರ ವಿಚಾರಗಳ ಬಗ್ಗೆ ಈ ರೀತಿಯ ಚರ್ಚೆ ಅಗತ್ಯ, ನಮ್ಮ ಸಂವಿಧಾನವೂ ಇದಕ್ಕೆ ಪುಷ್ಟಿ ನೀಡಿದೆ. ಆದರೆ ಈಗ ಬಜೆಟ್ ಗಾತ್ರ ಹಲವಾರು ಪಟ್ಟು ವೃದ್ಧಿಸಿದೆ. ಆದರೆ ಅದಕ್ಕೆ ತಕ್ಕಂತೆ ಸಂಸದೀಯ ಚರ್ಚೆ ನಡೆಯುತ್ತಿಲ್ಲ. ಚರ್ಚೆಯೇ ನಡೆಯದೆ ಪಂಚವಾರ್ಷಿಕ ಯೋಜನೆ, ವಿಧೇಯಕಗಳು ಅಂಗೀಕಾರವಾಗಿವೆ. ರಾಷ್ಟ್ರೀಯ ಮಹತ್ವದ ನಿರ್ಣಯಗಳ ಮೇಲೆ ಚರ್ಚೆ ಅಗತ್ಯ, ವಿಧೇಯಕಗಳ ಚರ್ಚೆಗೆ ಸಂಸದೀಯ ಸಮಯ ಕಡಿಮೆಯಾಗುತ್ತಿರುವುದು ದುರದೃಷ್ಟಕರ. ಆಡಳಿತ ವ್ಯವಸ್ಥೆ ಸಂಕೀರ್ಣವಾಗಿರುವಾಗ ವ್ಯಾಪಕ ಚರ್ಚೆಯಾಗದೆ ಜಾರಿಯಾಗುವ ಶಾಸನಗಳು ನಿರೀಕ್ಷಿತ ಫಲ ಕೊಡುವುದಿಲ್ಲ ಎಂದು ವಿವರಿಸಿದ್ದರು.

**ಕಟ್ಟಕಡೆಯ ಆಯ್ಕೆಯಾಗಬೇಕು:** "ಸುಗ್ರೀವಾಜ್ಞೆಯನ್ನು ತೀರಾ ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಬಳಸಬೇಕು. ಅದು ಕಟ್ಟಕಡೆಯ ಆಯ್ಕೆಯಾಗಬೇಕು. ಅನಿವಾರ್ಯ ಸಂದರ್ಭದಲ್ಲೂ ಸಂಸದೀಯ ಸಮಿತಿ ನಿಯಮಿತ ಸಮಯದೊಳಗೆ ತನ್ನ ವರದಿಯನ್ನು ಮಂಡಿಸಬೇಕು. ಹಣಕಾಸು ವಿಚಾರಗಳಲ್ಲಂತೂ ಸುಗ್ರೀವಾಜ್ಞೆ ಹೊರಡಿಸಲೇಬಾರದು" ಎಂದು ರಾಷ್ಟ್ರಪತಿ ಹುದ್ದೆಯಿಂದ ನಿರ್ಗಮಿಸುವ ವೇಳೆ ಪ್ರಣಬ್ ಮುಖರ್ಜಿ ಹೇಳಿದ್ದರು. 2013ರಲ್ಲಿ ಪ್ರಕಟವಾದ ವರದಿಗಳ ಪ್ರಕಾರ, ಇಂದಿರಾ ಗಾಂಧಿಯವರ ಆಡಳಿತಾವಧಿ, 1990ರ ಮಧ್ಯಭಾಗದಲ್ಲಿ ಸುಗ್ರೀವಾಜ್ಞೆಗಳನ್ನು ವ್ಯಾಪಕವಾಗಿ ಬಳಸಲಾಗಿತ್ತು. 90ರ ದಶಕದ ಮಧ್ಯಭಾಗದಲ್ಲಿ ಮೈತ್ರಿಕೂಟ ರಾಜಕಾರಣದ ಕಾಲಘಟ್ಟ ಆರಂಭವಾಗಿದ್ದಾಗ, ಅಸ್ಥಿರ ಸರ್ಕಾರಗಳ ಸಂದರ್ಭದಲ್ಲಿ ಸುಗ್ರೀವಾಜ್ಞೆಗಳಿಗೆ ಮೊರೆ ಹೋಗಲಾಗಿತ್ತು. ದುರ್ಬಲ ಜನಾದೇಶದ ಸಂಸತ್ತು ಮತ್ತು ಸುಗ್ರೀವಾಜ್ಞೆಗೂ ಸಂಬಂಧ ಕಲ್ಪಿಸುವುದರಲ್ಲಿ ಅರ್ಥವಿಲ್ಲದಿದ್ದರೂ, ಸುಗ್ರೀವಾಜ್ಞೆಗಳನ್ನು ಪದೇಪದೇ ಬಳಸುವುದು ಶಾಸಕಾಂಗ ಘನತೆ, ಹಿರಿಮೆಯ ದೃಷ್ಟಿಯಿಂದ ಸೂಕ್ತವೆನ್ನಿಸುವುದಿಲ್ಲ ಎಂದಿದ್ದರು.

**ಸುಗ್ರೀವಾಜ್ಞೆ ಎಂದರೆ:**ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂಸತ್ತು ಹಾಗೂ ಶಾಸನಸಭೆಗಳ ಅಧಿವೇಶನ ಇಲ್ಲದಿದ್ದ ಸಂದರ್ಭ ಕಾನೂನುಗಳನ್ನು ತಾತ್ಕಾಲಿಕವಾಗಿ ಜಾರಿಗೊಳಿಸಲು ಸುಗ್ರೀವಾಜ್ಞೆಯನ್ನು (Ordinance) ಹೊರಡಿಸಬಹುದು. ಸಂವಿಧಾನದ 123ನೇ ವಿಧಿಯ ಪ್ರಕಾರ ಅವಕಾಶವಿದೆ. ಆದರೆ ಹೊರಡಿಸಿದ 6 ತಿಂಗಳಿನೊಳಗೆ ಸಂಸತ್ತು ಶಾಸನಸಭೆಯಲ್ಲಿ ಅಂಗೀಕಾರವಾಗಬೇಕು. ಇಲ್ಲದಿದ್ದರೆ ಅದರ ಅವಧಿ ಮುಗಿಯುತ್ತದೆ. ಕಲಾಪ ಆರಂಭವಾದ 6 ವಾರಗಳೊಳಗೆ ಅಂಗೀಕಾರವಾಗಬೇಕು ಎಂಬ ನಿಯಮವಿದೆ. ಆದರೆ, ಕೇಂದ್ರ ,ರಾಜ್ಯ ಸರ್ಕಾರಗಳ ಸುಗ್ರೀವಾಜ್ಞೆಗೆ ರಾಷ್ಟ್ರಪತಿಯವರ ಅಂಕಿತ ಬೇಕು.

**ಸುಗ್ರೀವಾಜ್ಞೆಯ ಮೂಲಕ ಜಾರಿಯಾದ ಪ್ರಮುಖ ಕಾಯಿದೆ:** ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ 11 ಸುಗ್ರೀವಾಜ್ಞೆಗಳನ್ನು ವಿಧೇಯಕಗಳ ಮೂಲಕ ಬದಲಿಸಲಾಯಿತು. ಈ ಪೈಕಿ ಪ್ರಮುಖ ಸುಗ್ರೀವಾಜ್ಞೆಗಳು ಇಂತಿವೆ.

- ರೈತರ ಕೃಷಿ ಉತ್ಪನ್ನ ವ್ಯಾಪಾರ ಮತ್ತು ವಾಣಿಜ್ಯ ತಿದ್ದುಪಡಿ ಸುಗ್ರೀವಾಜ್ಞೆ,
- ಕೃಷಿ ಉತ್ಪನ್ನಗಳಿಗೆ ಖಾತರಿಯ ದರ ಮತ್ತು ಕೃಷಿ ಸೇವಾ ದರ ತಿದ್ದುಪಡಿ ಸುಗ್ರೀವಾಜ್ಞೆ,
- ಅಗತ್ಯ ವಸ್ತುಗಳ ತಿದ್ದುಪಡಿ ಸುಗ್ರೀವಾಜ್ಞೆ
- ಸಚಿವರುಗಳ ವೇತನ ಮತ್ತು ಭತ್ಯೆ ಸುಗ್ರೀವಾಜ್ಞೆ–2020.

- ಸಂಸದರ ವೇತನ ಮತ್ತು ಪಿಂಚಣಿ ತಿದ್ದುಪಡಿ ಸುಗ್ರೀವಾಜ್ಞೆ,
- ಸಾಂಕ್ರಾಮಿಕ ಕಾಯಿಲೆ ನಿಯಂತ್ರಣ ತಿದ್ದುಪಡಿ ಸುಗ್ರೀವಾಜ್ಞೆ,
- ಹೋಮಿಯೋಪತಿ ಸೆಂಟ್ರಲ್ ಕೌನ್ಸಿಲ್ ತಿದ್ದುಪಡಿ ಸುಗ್ರೀವಾಜ್ಞೆ,
- ಇಂಡಿಯನ್ ಮೆಡಿಕಲ್ ಸೆಂಟ್ರಲ್ ಕೌನ್ಸಿಲ್ ತಿದ್ದುಪಡಿ ಸುಗ್ರೀವಾಜ್ಞೆ,

**ಲೇಖಕರು: ಕೇಶವಪ್ರಸಾದ್ ಬಿ.**

**ಆಧಾರ:ವಿಜಯಕರ್ನಾಟಕ, ದಿನಾಂಕ:30.09.2020**

* * * * *

ನಿರ್ದೇಶಕರು, ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು. ಕಾ.ಸೂ. 607- 500 ಪ್ರತಿಗಳು